# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕೇಂದ್ರ ಕಛೇರಿ : : ಸಾರ್ವಜನಿಕ ಸಂಪರ್ಕ ಇಲಾಖೆ : : ಬೆಂಗಳೂರು-27

**ವೆಬ್‌ಸೈಟ್: www.mybmtc.com ಇ-ಮೇಲ್: pro@mybmtc.com ಸ.ವಾಣಿ: 22483777**


ಸಂಖ್ಯೆ: ಬೆಮಸಾಸಂ/ಕೇಕ/ಸಾಸಂಇ/ 556 /2021-22 ದಿನಾಂಕ: 15.03.2022

## "ಪತ್ರಿಕಾ ಪ್ರಕಟಣೆ"

**ವಿಷಯ:-** ಮೃತ ನೌಕರರ ಅವಲಂಬಿತರಿಗೆ ಹಾಗೂ ನಿವೃತ್ತ ನೌಕರರಿಗೆ ಧನಾದೇಶ ವಿತರಣೆ ಸಮಾರಂಭ

ಕೋವಿಡ್-19 ಸಾಂಕ್ರಾಮಿಕ ರೋಗದ ಪರಿಣಾಮವಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ತೀವ್ರ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ವೃತಪಟ್ಟ ನೌಕರರ ಅವಲಂಬಿತರುಗಳಿಗೆ, ನಿವೃತ್ತ ನೌಕರರುಗಳಿಗೆ ಸಲ್ಲಬೇಕಾದ ಅಂತಿಮ ಆರ್ಥಿಕ ಸವಲತ್ತುಗಳನ್ನು ನೀಡಲು ತಡವಾಗಿರುತ್ತದೆ. ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿ ಘನ ಸರ್ಕಾರವು ಸಂಸ್ಥೆಗೆ ವಿಶೇಷ ರೂ. 200.00 ಕೋಟಿಗಳ ಆರ್ಥಿಕ ಸಹಾಯ ಧನವನ್ನು ಮಂಜೂರು ಮಾಡಿದೆ. ಸದರಿ ಮೊತ್ತದಲ್ಲಿ ರೂ.100.00 ಕೋಟಿಗಳನ್ನು ಭವಿಷ್ಯ ನಿಧಿಗೆ, ಸುಮಾರು ರೂ. 90.00 ಕೋಟಿಗಳನ್ನು ಉಪಧನ, ರಜೆ ನಗಧೀಕರಣ, ಪಾವತಿಗಳಿಗಾಗಿ ನೀಡಲು ಆದೇಶಿಸಿದೆ.

ಸಂಸ್ಥೆಯು ಮೊದಲನೇ ಹಂತದಲ್ಲಿ, ಸುಮಾರು 118 ಮೃತ ನೌಕರರ ಅವಲಂಬಿತರಿಗೆ ಒಟ್ಟು ರೂ.9.46 ಕೋಟಿಗಳ ಧನಾದೇಶಗಳನ್ನು ನೌಕರರ ನಾಮ ನಿರ್ದೇಶಿತರಿಗೆ ವಿತರಿಸಲು ದಿ:14.03.2022 ರಂದು ಹಾಗೂ ದಿ: 15.03.2022 ರಂದು ಕೇಂದ್ರ ಕಚೇರಿಯ ಸಭಾಂಗಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ. ನಂದೀಶ್ ರೆಡ್ಡಿ ರವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮಕ್ಕೆ ಉಪಾಧ್ಯಕ್ಷರಾದ ಶ್ರೀ.ಎಂ.ಆರ್.ವೆಂಕಟೇಶ್ ರವರು ಶ್ರೀ. ವಿ.ಅನ್ಬುಕುಮಾರ್ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಶ್ರೀಮತಿ.ರಾಧಿಕಾ.ಜಿ, ನಿರ್ದೇಶಕರು(ಭ&ಜಾ) ಶ್ರೀ.ಎ.ವಿ.ಸೂರ್ಯ ಸೇನ್, ನಿರ್ದೇಶಕರು (ಮಾ&ತಂ) ಹಾಗೂ ಶ್ರೀ. ಅಬ್ದುಲ್ ಖುದ್ದೂಸ್, ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು ಭಾಗವಹಿಸಿದ್ದರು.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಮಾತನಾಡಿ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದ ಕಾರಣ ಅಂತಿಮ ಆರ್ಥಿಕ ಸೌಲಭ್ಯಗಳನ್ನು ನೀಡಲು ವಿಳಂಭವಾಗಿರುತ್ತದೆ. ಆದರೆ, ಸತತ ಪ್ರಯತ್ನಗಳ ಫಲವಾಗಿ ಸರ್ಕಾರವು ಸಂಸ್ಥೆಯ ಮನವಿಯನ್ನು ಪರಿಗಣಿಸಿ ವಿಶೇಷ ಆರ್ಥಿಕ ಸಹಾಯವನ್ನು ನೀಡಿರುವುದರ ಪರಿಣಾಮ ಇಂದು ಮೃತರ ಅವಲಂಭಿತರಿಗೆ ಎಲ್ಲಾ ಸೌಲಭ್ಯಗಳನ್ನು ಇಂದೇ ವಿತರಿಸುವ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ ಎಂದು ತಿಳಿಸಿದರು. ಇದೇ ರೀತಿ ಒಟ್ಟು 559 ಪ್ರಕರಣಗಳಲ್ಲಿ ಒಟ್ಟಾರೆಯಾಗಿ ರೂ.94.00 ಕೋಟಿಗಳ ಅಂತಿಮ ಆರ್ಥಿಕ ಸೌಲಭ್ಯ ವತರಣೆ ನಡೆಸಲಾಗುವುದು ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿರುತ್ತಾರೆ.

ಮುಂದುವರೆದು, ಸಮಾರಂಭದ ಮುಖ್ಯ ಅತಿಥಿಗಳಾದ ಮಾನ್ಯ ಅಧ್ಯಕ್ಷರಾದ ಶ್ರೀ.ನಂದೀಶ್ ರೆಡ್ಡಿ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಕೋವಿಡ್ ಮುಂಚೆ ಸಂಸ್ಥೆಯ ಸಾರಿಗೆ ಆದಾಯ ಸರಿಸುಮಾರು ರೂ.6.00 ಕೋಟಿಗಳಿದ್ದು, ಕೋವಿಡ್ ಸಂಕಷ್ಟದಲ್ಲಿ ಸಂಸ್ಥೆಯ ಸಾರಿಗೆ ಆದಾಯದಲ್ಲಿ ತೀವ್ರ ಹಿನ್ನೆಡೆ ಉಂಟಾಗಿ ರೂ.3.5 ಕೋಟಿಗಳಿಗೆ ಇಳಿಮುಖವಾಗಿದ್ದು. ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ಸಂಸ್ಥೆಯ ದೈನಂದಿನ ಖರ್ಚು ವೆಚ್ಚಗಳನ್ನು ಸರಿದೂಗಿಸಲು ಸಾಧ್ಯವಿರಲಿಲ್ಲ. ಆದರೆ, ಘನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ರೂ. 200.00 ಕೋಟಿಗಳ ವಿಶೇಷ ಸಹಾಯ ಧ'ನವನ್ನು ಮಂಜೂರು ಮಾಡಿದ್ದು, ಇದಕ್ಕೆ ಸಂಸ್ಥೆಯು ಆಭಾರಿಯಾಗಿರುವುದಾಗಿ ತಿಳಿಸಿದರು

ಮಾನ್ಯ ಉಪಾಧ್ಯಕ್ಷರಾದ ಶ್ರೀ. ಎಂ.ಆರ್.ವೆಂಕಟೇಶ್ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಕೋವಿಡ್ ಸಂಕಷ್ಟದಲ್ಲಿ ಸುಮಾರು ಉದ್ಯಮಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಈ ಸಂದರ್ಭದಲ್ಲಿ ಘನ ಸರ್ಕಾರವು ನಮ್ಮ ಸಂಸ್ಥೆಗೆ ವಿಶೇಷವಾಗಿ ರೂ.200.00 ಕೋಟಿಗಳ ಸಹಾಯ ಧನ ನೀಡಿ ಉಪಕರಿಸಿರುತ್ತದೆ ಎಂದು ತಿಳಿಸಿದರು. ಈ ಸಹಾಯಕ್ಕೆ ಸಂಸ್ಥೆಯ ಪರವಾಗಿ ಸರ್ಕಾರಕ್ಕೆ ವಿಶೇಷ ಅಭಿನಂದನೆಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಮೃತ ನೌಕರರ ಅವಲಂಬಿತರರಿಗೆ ಒಟ್ಟು ರೂ.9.46 ಕೋಟಿಗಳ ಧನಾದೇಶಗಳನ್ನು ಹಾಗೂ 138 ನಿವೃತ್ತ ನೌಕರರಿಗೆ ಅಂತಿಮ ಆರ್ಥಿಕ ಸೌಲಭ್ಯಗಳ ರೂ.19.95 ಕೋಟಿಗಳ ಧನಾದೇಶವನ್ನು ವಿತರಿಸಲಾಯಿತು.

ಸಹಿ/-

**ಸಾರ್ವಜನಿಕ ಸಂಪರ್ಕಾಧಿಕಾರಿ**

ಇವರಿಗೆ:

**ಸಂಪಾದಕರು/ಪತ್ರಿಕೋದ್ಯಮ**

ಈ ಮೇಲಿನ ಪತ್ರಿಕಾ ಪ್ರಕಟಣೆಯನ್ನು ತಮ್ಮ ದಿನಪತ್ರಿಕೆ/ದೃಷ್ಯ/ಎಫ್‌ಎಂ ರೇಡಿಯೊ/ಮುದ್ರಣ ಮಾಧ್ಯಮಗಳಲ್ಲಿ ಪ್ರಕಟಿಸಿ ಸಾರ್ವಜನಿಕ ಪ್ರಯಾಣಿಕರ ಗಮನಕ್ಕೆ ತರಲು ಕೋರಲಾಗಿದೆ.